**ಓ.ಎಸ್. ನಂಃ 354/2019**

**ಪಿ.ಡಬ್ಲ್ಯೂಃ 1**

**ದಿನಾಂಕ 18.10.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿಯರ ಪರ ಶ್ರೀ.ಪಿ.ಡಿ. ವಕೀಲರಿಂದಃ**

13. ನನ್ನ ತಂದೆಯವರಿಗೆ ಮೂರು ಜನ ಸಹೋದರರು. ಅವರ ಹೆಸರು ತಿಮ್ಮೇಗೌಡ, ಕರೀಗೌಡ ಮತ್ತು ಸಣ್ಣೀಗೌಡ ಅಂತ ಇರುತ್ತದೆ. 3 ನೇ ಪ್ರತಿವಾದಿಯು ನನ್ನ ತಂದೆಯ ಹಿರಿಯ ಸಹೋದರನಾದ ತಿಮ್ಮೇಗೌಡರ ಮಗಳು ಎಂದರೆ ಸರಿ. ನನ್ನ ತಾತನಾದ ಹೆಗ್ಗಡಿ ತಿಮ್ಮೇಗೌಡರ ಆಸ್ತಿಗಳನ್ನು ನನ್ನ ತಂದೆ ಮತ್ತು ಅವರ ಸಹೋದರರು ಪಾಲು ಮಾಡಿಕೊಂಡಿದ್ದು, ಸದರಿ ಪಾಲು ವಿಭಜನೆಯಲ್ಲಿ ನನ್ನ ತಂದೆ ಮತ್ತು ಅವರ 3 ಜನ ಸಹೋದರರಿಗೆ ತಲಾ 4 ಎಕರೆ ಜಮೀನು ಹೋಗಿರುತ್ತದೆ. ಸದರಿ ಪಾಲು ವಿಭಜನೆಯಲ್ಲಿ ಆಯಾ ಹಿಸ್ಸೆದಾರರ ಹಿಸ್ಸೆಗೆ ಬಂದ ಆಸ್ತಿಗಳನ್ನು ಆಯಾ ಹಿಸ್ಸೆದಾರರು ತಮ್ಮ ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದರೆ ಸರಿಯಲ್ಲ.

14. ನನ್ನ ದೊಡ್ಡಪ್ಪನಾದ ತಿಮ್ಮೇಗೌಡರಿಗೆ 3 ನೇ ಪ್ರತಿವಾದಿ ಒಬ್ಬಳೇ ಮಗಳು ಇದ್ದು, ಅವರಿಗೆ ಬೇರೆ ಮಕ್ಕಳಿರಲಿಲ್ಲ. ಅದ್ದರಿಂದ ನನ್ನ ದೊಡ್ಡಪ್ಪನಾದ ತಿಮ್ಮೇಗೌಡರ ಆಸ್ತಿಗಳಿಗೆ 3 ನೇ ಪ್ರತಿವಾದಿ ಒಬ್ಬರೇ ವಾರಸುದಾರರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 1 ಮತ್ತು 2 ನೇ ಪ್ರತಿವಾದಿಯು ನಮ್ಮ ಆಸ್ತಿಯನ್ನು ಕದ್ದು ತಮ್ಮ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ. ನಮ್ಮ ಕುಟುಂಬದಲ್ಲಿ ಗಂಡಸರು ತಿಮ್ಮೇಗೌಡ ಅಂತ ಹಾಗೂ ಹೆಂಗಸರು ತಿಮ್ಮಮ್ಮ ಅಂತ ಹೆಸರನ್ನು ಇಟ್ಟುಕೊಳ್ಳುವ ವಾಡಿಕೆ ಇದೆ ಎಂದರೆ ಸರಿಯಲ್ಲ. ಆದ್ದರಿಂದ 3 ನೇ ಪ್ರತಿವಾದಿಯ ಹುಟ್ಟು ಹೆಸರು ತಿಮ್ಮಮ್ಮ ಅಂತ ಇದ್ದು, ಕೇವಲ ಅವರ ದಾಖಲೆಗಳಲ್ಲಿ ಮಾತ್ರ ಅವರ ಹೆಸರು ನಾಗಮ್ಮ ಅಂತ ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

15. 3 ನೇ ಪ್ರತಿವಾದಿಯು ಇದೇ ದಾವೆಯಲ್ಲಿ ತಮ್ಮ ವಕೀಲರ ಮೂಲಕ ಹಾಜರಾಗಿ ಪ್ರತಿವಾದ ಪತ್ರವನ್ನು ಸಲ್ಲಿಸಿರುತ್ತಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಸಲ್ಲಿಸಿದ ಪ್ರತಿವಾದ ಪತ್ರಗಳಲ್ಲಿರುವ ವಿಷಯಗಳನ್ನು ನಾನು ತಿಳಿದುಕೊಳ್ಳದೇ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನಾದ

ಸಣ್ಣೇಗೌಡರಿಂದ 4,000/-ರೂಪಾಯಿಯನ್ನು ಪಡೆದು ದಾವಾ ಆಸ್ತಿಯ ಸಂಬಂಧ ನಿಡಿ.3 ರ ಹಕ್ಕು ಖುಲಾಸೆ ಪತ್ರವನ್ನು 1 ನೇ ಪ್ರತಿವಾದಿಯ ಗಂಡನಿಗೆ ತಾವು ಬರೆದುಕೊಟ್ಟಿರುವುದಾಗಿ 3 ನೇ ಪ್ರತಿವಾದಿಯು ತಮ್ಮ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ.

16. ನನ್ನ ತಂದೆಯವರು 2001 ರಲ್ಲಿ ಮರಣ ಹೊಂದಿರುತ್ತಾರೆ. ನಿಡಿ.3 ರ ಹಕ್ಕು ಖುಲಾಸೆ ಪತ್ರವನ್ನು ನಾವಾಗಲೀ ಅಥವಾ ನಮ್ಮ ತಂದೆಯಾಗಲೀ ಪ್ರಶ್ನಿಸಿರುವುದಿಲ್ಲ ಕಾರಣ ನಮಗೆ ನಿಡಿ.3 ರ ಹಕ್ಕು ಖುಲಾಸೆ ಪತ್ರದ ಬಗ್ಗೆ ಮಾಹಿತಿ ಇರಲಿಲ್ಲ ಎಂದು ನುಡಿದಿರುತ್ತಾರೆ. 3 ನೇ ಪ್ರತಿವಾದಿಯು ವಿವಾಹವಾದ ನಂತರ ತಮ್ಮ ತಂದೆಯಿಂದ ಬಂದ ಆಸ್ತಿಗಳನ್ನು 3 ನೇ ಪ್ರತಿವಾದಿಯು 1 ನೇ ಪ್ರತಿವಾದಿಯ ಗಂಡನಿಗೆ ಬರೆದುಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ತನ್ನ ತಂದೆಯಿಂದ ಬಂದ ಆಸ್ತಿಗಳೆನ್ನೆಲ್ಲಾ 3 ನೇ ಪ್ರತಿವಾದಿಯು ತಮ್ಮ ವಿವಾಹದ ನಂತರ 1 ನೇ ಪ್ರತಿವಾದಿಯ ಗಂಡನಿಗೆ ಸ್ವಾಧೀನ ಬಿಟ್ಟುಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

17. 3 ನೇ ಪ್ರತಿವಾದಿಗೆ ತಮ್ಮ ತಂದೆಯಿಂದ ಬಂದಿದ್ದ ಆಸ್ತಿಗಳನ್ನು 1 ಮತ್ತು 2 ನೇ ಪ್ರತಿವಾದಿಯರು ಉಳುಮೆ ಮಾಡುತ್ತಿದ್ದಾರೆ. ಸಾಕ್ಷಿಯು ಮುಂದುವರೆದು ನಮ್ಮ ಆಸ್ತಿಯನ್ನು ನಾವೇ ಉಳುಮೆ ಮಾಡುತ್ತಿದ್ದೇವೆ ಎಂದು ಸ್ವತಃ ನುಡಿದಿರುತ್ತಾರೆ. ದಾವಾ ಆಸ್ತಿಯನ್ನು 3 ನೇ ಪ್ರತಿವಾದಿಯು ನಿಡಿ.3 ರ ಹಕ್ಕು ಖುಲಾಸೆಯ ಪತ್ರದ ಮೂಲಕ 1 ನೇ ಪ್ರತಿವಾದಿಯ ಗಂಡನಿಗೆ ಕೊಟ್ಟ ನಂತರದಿಂದ ಇಲ್ಲಿಯವರೆಗೂ 1 ಮತ್ತು 2 ನೇ ಪ್ರತಿವಾದಿಯರೇ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. 3 ನೇ ಪ್ರತಿವಾದಿಯು ಬರೆದುಕೊಟ್ಟ ನಿಡಿ.3 ರ ಹಕ್ಕು ಖುಲಾಸೆಯ ಪತ್ರದ ಪ್ರಕಾರ ದಾವಾ ಆಸ್ತಿಯು 1 ನೇ ಪ್ರತಿವಾದಿಯ ಗಂಡನ ಹೆಸರಿಗೆ ಖಾತೆ ವರ್ಗಾವಣೆ ಆಗಿರುತ್ತದೆ ಎಂದರೆ ಸರಿಯಲ್ಲ. 1 ನೇ ಪ್ರತಿವಾದಿಯ ಗಂಡನ ಮರಣದ ನಂತರ ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಪೌತಿ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿಯು ನಮ್ಮ ಆಸ್ತಿಯನ್ನು ಸೇರಿಸಿ ನಮ್ಮ ಗಮನಕ್ಕೆ ಬಾರದೇ 1 ಮತ್ತು 2 ನೇ ಪ್ರತಿವಾದಿಯರು ನಮ್ಮ ಆಸ್ತಿಯನ್ನು ತಮ್ಮ ಹೆಸರಿಗೆ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ.

18. ದಾವಾ ಆಸ್ತಿಯು ನನ್ನ ತಂದೆಯವರ ಹಿಸ್ಸೆಗೆ ಹೋಗಿತ್ತು ಎಂದು ತೋರಿಸಲು ನಾನು ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಇತ್ತೀಚೆಗೆ ನಾವು ದಾವಾ ಆಸ್ತಿಯ ಪಹಣಿಗಳನ್ನು ತೆಗೆದು ನೋಡಿದಾಗ ದಾವಾ ಆಸ್ತಿಯು 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ಖಾತೆ ಆಗಿರುವುದು ನಮಗೆ ಇತ್ತೀಚೆಗೆ ಗೊತ್ತಾಗಿರುವ ಕಾರಣ 1 ಮತ್ತು 2 ನೇ ಪ್ರತಿವಾದಿಯರ ಹೆಸರಿಗೆ ದಾವಾ ಆಸ್ತಿ ಖಾತೆ ವರ್ಗಾವಣೆ ಆಗಿರುವುದನ್ನು ನಾವು, ನಮ್ಮ ತಂದೆ ಅಥವಾ ನನ್ನ ತಂದೆಯ ಉಳಿದ ಸಹೋದರರು ಪ್ರಶ್ನಿಸಿರುವುದಿಲ್ಲ.

19. ಪ್ರತಿವಾದಿಯರು ದಾವಾ ಆಸ್ತಿಯನ್ನು ಬ್ಯಾಂಕ್‌ಗೆ ಅಡಮಾನ ಮಾಡಿ ಸಾಲವನು ಪಡೆದಿರುತ್ತಾರೆ ಎಂದರೆ ಸಾಕ್ಷಿಯು ನಾವೇ ದಾವಾ ಆಸ್ತಿಯ ಸ್ವಾಧೀನದಲ್ಲಿದ್ದು, 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಹೆಸರಿಗೆ ಮೋಸದಿಂದ ಖಾತೆಯನ್ನು ಮಾಡಿಸಿಕೊಂಡು ಸದರಿ ಖಾತೆಯ ಆಧಾರದ ಮೇಲೆ ಸಹಕಾರ ಸಂಘದಿಂದ ಸಾಲ ಪಡೆದಿರುತ್ತಾರೆ ಎಂದು ನುಡಿದಿರುತ್ತಾರೆ. ಸಾಮಾನ್ಯವಾಗಿ ಪಹಣಿ, ವರ್ಗಾವಣೆ ಆದೇಶ, ಭೂ-ಹಿಡುವಳಿ ಪತ್ರ ಮತ್ತು ಚೆಕ್ಕುಬಂಧಿ ದೃಢೀಕರಣ ಪತ್ರ ಹಾಗೂ ಮೂಲ ನೊಂದಾಯಿತ ದಾಖಲೆಗಳನ್ನು ನೋಡಿದ ನಂತರದಲ್ಲಿ ಬ್ಯಾಂಕಿನಿಂದ ಸಾಲ ಮಂಜೂರು ಮಾಡುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಕಂದಾಯ ಅಧಿಕಾರಿಗಳಿಗೆ ದುಡ್ಡು ಕೊಟ್ಟು ಚೆಕ್ಕುಬಂಧಿ ದೃಢೀಕರಣ ಪತ್ರವನ್ನು ಪಡೆದುಕೊಂಡಿರುತ್ತಾರೆ ಎಂದು ಸ್ವತಃ ನುಡಿದಿರುತ್ತಾರೆ.

20. 1 ಮತ್ತು 2 ನೇ ಪ್ರತಿವಾದಿಯರು ತಮ್ಮ ಮೂಲ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ ನಂತರ ನಾವು ವಾದ ಪತ್ರದಲ್ಲಿ ಸುಳ್ಳು ತಿದ್ದುಪಡಿಯನ್ನು ಮಾಡಿರುತ್ತೇವೆ ಎಂದರೆ ಸರಿಯಲ್ಲ. ತಾವು 1 ನೇ ಪ್ರತಿವಾದಿಯ ಗಂಡನಿಗೆ ದಾವಾ ಆಸ್ತಿಯನ್ನು ನಿಡಿ.3 ರ ಪ್ರಕಾರ ಬರೆದುಕೊಟ್ಟಿರುವುದಾಗಿ ಪ್ರತಿವಾದ ಪತ್ರದಲ್ಲಿ ಹೇಳಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಯಾವುದೇ ಹಕ್ಕು ಇಲ್ಲದಿದ್ದರು ಸಹ ನಾನು ಸುಳ್ಳು ದಾವೆಯನ್ನು ಹೂಡಿ, ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಸರ್ವೇ ನಂಬರ್ 23/1 ರಲ್ಲಿ 2 ಎಕರೆ 1 ಗುಂಟೆ ಜಮೀನು ನನ್ನ ತಂದೆಯ ಹೆಸರಿಗೆ ವರ್ಗಾವಣೆ ಆಗಿರುವುದು ಹೊರತುಪಡಿಸಿ ಬೇರೆ ಯಾವುದೇ ಜಮೀನು ನಮ್ಮ ತಂದೆಯ ಹೆಸರಿಗೆ ಖಾತೆ ವರ್ಗಾವಣೆ ಆಗಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ತಾತನಾದ ಹೆಗ್ಗಡಿ ತಿಮ್ಮೇಗೌಡರಿಗೆ 12 ಎಕರೆ

30 ಗುಂಟೆ ಜಮೀನು ಇದ್ದು, ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಆಸ್ತಿಗೂ ಮತ್ತು ನಮಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**